**1ನೇ ಹೆಚ್ಚುವರಿ ಜಿಲ್ಲಾ  ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ,**

**ಮಡಿಕೇರಿ–ಕೊಡಗು**

**ಎಂ.ವಿ.ಸಿ ಸಂಖ್ಯೆ 41/2024**

**RW–1**

**ಸಾಕ್ಷಿಯನ್ನು ದಿನಾಂಕ 09–02–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**Witness present stepped in to witness box and filed his affidavit as chief examination and confirms the contents of the affidavit is as per his say and the affidavit is under his signature. Hence, the affidavit is treated as chief examination as RW-1.**

**ಮುಖ್ಯವಿಚಾರಣೆ: ಎದುರುದಾರರ ಪರ ಶ್ರೀ. ಎಂ.ಎ.ಎನ್ ವಕೀಲರಿಂದಃ**

1. ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನ್ನ ನಂಬಿಕೆ ಮತ್ತು ಜ್ಞಾನಕ್ಕೆ ಸಂಬಂಧಪಟ್ಟಂತೆ ನಿಜ ಇರುತ್ತದೆ.  ಈ ಕೇಸಿನಲ್ಲಿ ನಾನು ಹಾಜರು ಪಡಿಸಿದ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಬೇಕಾಗಿ ವಿನಂತಿಸುತ್ತೇನೆ.  ಸಾಕ್ಷಿ ಹಾಜರು ಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

| | |
|---|---|
| Notarized copy of DL of Respondent No.1 | ನಿಆರ್–1 |
| Notarized copy of RC of Respondent No.1 | ನಿಆರ್–2 |
| Notarized copy of the Insurance | ನಿಆರ್–3 |

ನಿಆರ್– 1 ಮತ್ತು 2 ನೇ ದಾಖಲಾತಿಗಳು ನೋಟರೀಕೃತ ಡಿ.ಎಲ್ ಮತ್ತು ಆರ್.ಸಿ ಪ್ರತಿಗಳಾಗಿದ್ದು, ಅವುಗಳ ಮೂಲ ದಾಖಲಾತಿಗಳ ಪರಿಶೀಲನೆ ಮಾಡಿ ನಿಆರ್–1

ಮತ್ತು 2 ದಿನನಿತ್ಯದ ಬಳಕೆಗಾಗಿ ಅಗತ್ಯವಿರುವುದರಿಂದ ಅವುಗಳ ನೋಟರೀ ಪ್ರತಿಗಳನ್ನು ಗುರುತಮಾಡಿ ಮೂಲ ನಿಆರ್-1 ಮತ್ತು 2 ನ್ನು ಹಿಂದಿರುಗಿಸಲಾಯಿತು. ನಿಆರ್-3 ವಿಮೆ ಆಗಿದ್ದು, ಸದರಿ ವಿಮೆಯನ್ನು 2ನೇ ಎದುರುದಾರರು ತಮ್ಮ ತಕರಾರು ಅರ್ಜಿಯಲ್ಲಿ ಒಪ್ಪಿಕೊಂಡ ಕಾರಣ ನಿಆರ್-3 ನ್ನು ಗುರುತಮಾಡಲಾಯಿತು. ಆದ್ದರಿಂದ ಈ ಅರ್ಜಿಯನ್ನು ಪುಸ್ಕರಿಸಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

**ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ.ನ್ಯಾಯಾಧೀಶರು,
ಕೊಡಗು-ಮಡಿಕೇರಿ.

**ಸಾಕ್ಷಿಯನ್ನು ದಿನಾಂಕ 20-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್ ವಕೀಲರಿಂದಃ**

2. ದಿಃ 21-11-2023 ರಂದು ಹುಣಸೂರು ಮುಖ್ಯ ರಸ್ತೆಯಲ್ಲಿ ಕಾರ್ ಮತ್ತು ದ್ವಿಚಕ್ರ ವಾಹನದ ನಡುವೆ ಅಪಘಾತ ಉಂಟಾಗಿತ್ತು ಎಂದರೆ ಸಾಕ್ಷಿ ನನ್ನ ಕಾರಿಗೆ ದ್ವಿಚಕ್ರ ವಾಹನ ಡಿಕ್ಕಿ ಪಡಿಸಿರುತ್ತದೆ ಎನ್ನುತ್ತಾರೆ. ಹುಣಸೂರು ಪಿರಿಯಾಪಟ್ಟಣ ಮುಖ್ಯರಸ್ತೆಯ ಯಶೋಧರಪುರ ಗ್ರಾಮ ರೊಟೀನ ಹೊಟೇಲ್ ಬಳಿ ನನ್ನ ಕಾರನ್ನು ನಿಲ್ಲಿಸಿದ್ದೆನು ಎಂದರೆ ಸರಿಯಲ್ಲ. ನಾನು ಮೈಸೂರಿನಿಂದ ಪೊನ್ನಂಪೇಟೆಯ ಬಳಿಗೆ ನನ್ನ ಕಾರಿನಲ್ಲಿ ಚಲಿಸುತ್ತಿದ್ದೆ. ಸದರಿ ದ್ವಿಚಕ್ರ ವಾಹನವು ನನ್ನ ಹಿಂಭಾಗದಿಂದ ಬಂದು ನನ್ನ ಕಾರಿನ ಬಲಭಾಗದ ಮುಂದಿನ ಚಕ್ರಕ್ಕೆ ಡಿಕ್ಕಿ ಪಡಿಸಿತ್ತು. ನನ್ನ ಕಾರನ್ನು ರೊಟೀನ ಹೊಟೇಲ್ ಸ್ಥಳದಿಂದ ಬಲಭಾಗದ ಹಿಂದಕ್ಕೆ ತೆಗೆದಾಗ ರಸ್ತೆಗೆ ಅಡ್ಡವಾದಾಗ ದ್ವಿಚಕ್ರ ವಾಹನ ಬಂದು ಡಿಕ್ಕಿ ಪಡಿಸಿತ್ತು ಎಂದರೆ ಸಾಕ್ಷಿಯು ದ್ವಿಚಕ್ರ ವಾಹನದ ಸವಾರನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿದ ಎನ್ನುತ್ತಾರೆ. ಸದರಿ ದ್ವಿಚಕ್ರ ವಾಹನದ ಚಾಲಕನಿಗೂ ಸಹ ಅಪಘಾತದ ಪರಿಣಾಮ ತೀವ್ರಗಾಯವಾಗಿತ್ತು ಎಂದರೆ ಸರಿ. ಸದರಿ ಅಪಘಾತದ ಕುರಿತಾಗಿ ನಾನು ಮತ್ತು ದ್ವಿಚಕ್ರ ವಾಹನದ ಚಾಲಕನೂ ಸಹ ಪರಸ್ಪರ ದೂರು ನೀಡಿರುತ್ತೇವೆ ಎಂದರೆ ಸರಿ. ಅಪಘಾತವನ್ನು ಯಾರು ಪ್ರತ್ಯಕ್ಷ ನೋಡಿರಲಿಲ್ಲ. ಅಪಘಾತವಾದ ಸ್ಥಳದ ಬಳಿಯಿದ್ದ ಹೊಟೇಲ್ ಗಳಲ್ಲಿ ಸಿಸಿ ಟಿವಿ ಕ್ಯಾಮರ ಇತ್ತು, ಅದರಲ್ಲಿ ಸದರಿ ಅಪಘಾತ ಸೆರೆಯಾಗಿತ್ತು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ದ್ವಿಚಕ್ರ ವಾಹನದ ಚಾಲಕ ನೀಡಿದ ದೂರನ್ನು ಅನುಸರಿಸಿ ಪೊಲೀಸರು ನನ್ನ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು FIR ಹಾಕಿರುತ್ತಾರೆ ಎನ್ನುತ್ತಾರೆ. ಈ ವಿಚಾರವಾಗಿ ಹುಣಸೂರು

ನ್ಯಾಯಾಲಯದಲ್ಲಿ ತಪ್ಪು ಒಪ್ಪಿಕೊಂಡು ರೂ. 1,600/- ದಂಡವನ್ನೂ ಸಹ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ಅಪಘಾತವಾದ ನಂತರ ದ್ವಿಚಕ್ರ ವಾಹನದ ಚಾಲಕನಿಗೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ದ್ವಿಚಕ್ರ ವಾಹನದ ಚಾಲಕನ ಮೇಲೆ ತಪ್ಪನ್ನು ಹೊರಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಲಕನಿಗೆ ಪರಿಹಾರ ನೀಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ.ನ್ಯಾಯಾಧೀಶರು,
ಕೊಡಗು-ಮಡಿಕೇರಿ.